**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 1, July-August 2022, Pp. 53-60.**
**IIMRD, Mysuru.**

**www.iimrd.com**

# ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಅಭಿವೃದ್ಧಿ ಆಡಳಿತ: ಒಂದು ಅವಲೋಕನ

**ಶಶಿಕುಮಾರ್. ಡಿ.ಎನ್***

*ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಸಾರಾಂಶ: (Abstract)**

*ರಾಜತಂತ್ರ ಮತ್ತು ಪ್ರಜಾತಂತ್ರ ಎರಡನ್ನೂ ಸಮಚಿತ್ತದಿಂದ ಅನುಭವಿಸಿದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಮೈಸೂರು ಸಂಸ್ಥಾನದ 25ನೇ ಹಾಗೂ ಕೊನೆಯ ಮಹಾರಾಜರು. 'ರಾಜಯೋಗಿ' ಎಂದೇ ಬಿರುದಾಂಕಿತರಾದ ಇವರು ಸದಾ ಜನಪರ ಕಾರ್ಯಗಳಿಂದ, ಸಮಾಜವಾದಿ ಚಿಂತನೆಗಳಿಂದ, ಮತ್ತು ಆದರ್ಶ ಮಾದರಿ ಆಡಳಿತದಿಂದ ಇತಿಹಾಸದ ಪುಟದಲ್ಲಿ ಹೆಸರಾದವರು. 'ವಿಶಾಲ ಕರ್ನಾಟಕ ರಚನೆಯ' ಕನಸನ್ನು ಹೊಂದಿದ್ದ ಇವರು ಮಹಾರಾಜರಾಗಿ, ರಾಜಪ್ರಮುಖರಾಗಿ ನಂತರ ರಾಜ್ಯಪಾಲ ಸಹಿತ ಹಲವಾರು ಹುದ್ದೆಗಳ ಮೂಲಕ ಜನಪರವಾದ ಅಭಿವೃದ್ಧಿ ಆಡಳಿತವನ್ನು ನೀಡಿದರು. ಭಾರತ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಭಾರತ ಸರ್ಕಾರದಲ್ಲಿ 'ರಾಜ ಸಂಸ್ಥಾನಗಳ ವಿಲೀನದ ಒಪ್ಪಂದ'ಕ್ಕೆ ಸಹಿ ಹಾಕಿದ ಇವರು ರಾಜತ್ವದಿಂದ ಪ್ರಜಾಪ್ರಭುತ್ವದ ಸ್ಥಾಪನೆಗೆ ಮುಂದಾದ ದೇಶದ ಮೊಟ್ಟ ಮೊದಲ ಮಹಾರಾಜರು. ಪ್ರಸ್ತುತ ಲೇಖನವು ವಿವರಣಾತ್ಮಕ ಸ್ವರೂಪದಲ್ಲಿದ್ದು, ಸಂಪೂರ್ಣವಾಗಿ ಅನುಷಂಗಿಕ/ದ್ವಿತೀಯ ಮೂಲಗಳಿಂದ ಸಂಗ್ರಹಿಸಿದ ದತ್ತಾಂಶಗಳನ್ನು ಆಧರಿಸಿದೆ. ಈ ಲೇಖನವು ಮಹಾರಾಜ ಜಯಚಾಮರಾಜೇಂದ್ರ ಒಡೆಯರವರ ಸಾಮಾಜಿಕ ನ್ಯಾಯ ಪರಿಕಲ್ಪನೆ, ಆಡಳಿತಾತ್ಮಕ ಸುಧಾರಣೆಗಳನ್ನು ಹಾಗೂ ಅಭಿವೃದ್ಧಿ ಆಡಳಿತದ ಉಪಕ್ರಮಗಳನ್ನು ಅವಲೋಕಿಸುವ ಉದ್ದೇಶವನ್ನು ಹೊಂದಿದೆ.*

**ಮುಖ್ಯಪದಗಳು (Keywords):** ರಾಜತಂತ್ರ, ಪ್ರಜಾತಂತ್ರ, ಆಡಳಿತ, ರಾಜ್ಯಪಾಲ, ಅಭಿವೃದ್ಧಿ, ಸಾಹಿತ್ಯ.

## ಪೀಠಿಕೆ

ಮೈಸೂರು ರಾಜ ಸಂಸ್ಥಾನದ ಪ್ರಮುಖರು ಮತ್ತು ಯದುವಂಶದ ಕೊನೆಯ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಯುವರಾಜ ಕಂಠೀರವ ನರಸರಾಜ ಒಡೆಯರ್ ಮತ್ತು ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿ ಅವರ ಪುತ್ರರಾಗಿ ಜುಲೈ 18, 1919ರಂದು ಮೈಸೂರು ರಾಜ್ಯದಲ್ಲಿ ಜನಿಸಿದರು. ಬಾಲ್ಯದಿಂದಲೂ ಬಹಳ ಚತುರ, ಕ್ರಿಯಾಶೀಲರಾದ ಇವರು ಪ್ರಾರಂಭಿಕ ಶಿಕ್ಷಣವನ್ನು

*Please cite this article as: ಶಶಿಕುಮಾರ್ ಡಿ ಎನ್.* (2022). ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಅಭಿವೃದ್ಧಿ ಆಡಳಿತ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.* 53–60.

ರಾಜಮನೆತನದ ರಾಯಲ್ ಹೈಸ್ಕೂಲ್‌ನಲ್ಲಿ ಪಡೆದರು. ಮೈಸೂರು ಸಂಸ್ಥಾನದ ಪ್ರಸಿದ್ಧ ರಾಜ ಹಾಗೂ ಜಯಚಾಮರಾಜೇಂದ್ರ ಒಡೆಯರವರ ಪೂರ್ವಾಧಿಕಾರಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಇವರ ದೊಡ್ಡಪ್ಪ. ನಾಲ್ವಡಿ ಕೃಷ್ಣರಾಜ ಒಡೆಯರ್ ಇವರಿಗೆ 15 ವರ್ಷ ವಯಸ್ಸಿದ್ದಾಗಲೇ ಮೈಸೂರಿನ ಲೋಕರಂಜನ ಮಹಲ್‌ನಲ್ಲಿ ಒಂದು ವಿಶೇಷ ಶಾಲೆ ಏರ್ಪಡಿಸಿ ಶಿಕ್ಷಣ ಕೊಡಿಸಿದರು. ರಾಜ್ಯಶಾಸ್ತ್ರ, ಸಾರ್ವಜನಿಕ ಆಡಳಿತ, ಅರ್ಥಶಾಸ್ತ್ರ, ಚರಿತ್ರೆ ಮತ್ತು ಆಫ್ರಿಕನ್ ವಿಷಯಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದ ಜಯಚಾಮರಾಜೇಂದ್ರ ಒಡೆಯರವರು 1938ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಚಿನ್ನದ ಪದಕಗಳೊಂದಿಗೆ ಪಡೆದರು. ಕುದುರೆಸವಾರಿ, ಟೆನಿಸ್, ಕ್ರಿಕೆಟ್ ಮುಂತಾದ ಕ್ರೀಡೆಗಳಲ್ಲಿ ನಿಪುಣರಾಗಿದ್ದ ಇವರು ಭಾರತೀಯ & ಪಾಶ್ಚಾತ್ಯ ಸಂಗೀತದಲ್ಲಿ ಉನ್ನತ ಪ್ರಭುತ್ವ ಹೊಂದಿದ್ದು, ಭಾರತದಲ್ಲೇ ಅತಿದೊಡ್ಡ ಪಾಶ್ಚಾತ್ಯ ಸಂಗೀತದ ಗ್ರಂಥಭಂಡಾರವನ್ನು ಹೊಂದಿದ್ದರು.

ಜಯಚಾಮರಾಜೇಂದ್ರ ಒಡೆಯರ್ ಅವರು ಒಬ್ಬ ಶ್ರೇಷ್ಠ ವಾಗ್ಗೇಯಕಾರ, ಉನ್ನತ ಆದರ್ಶದ ಕಲಾಪೋಷಕ, ಉತ್ತಮ ಕಲಾವಿದ, ಹಾಗೂ ಉತ್ತಮ ಸಾಹಿತಿಯಾಗಿದ್ದು, ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತದಲ್ಲಿ ಆಳವಾದ ಜ್ಞಾನ ಹೊಂದಿದ್ದರು. ವಿಶ್ವದ ಹೆಸರಾಂತ ಸಂಗೀತಗಾರರೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದ ಇವರು ಭಾರತೀಯ ಸಂಸ್ಕೃತಿ ಮತ್ತು ತತ್ವಶಾಸ್ತ್ರದ ಅನಧಿಕೃತ ರಾಯಭಾರಿಯಾಗಿ ಅನೇಕ ಬಾರಿ ದೇಶ–ವಿದೇಶಗಳಲ್ಲಿ ತತ್ವಜ್ಞಾನ, ಕಲೆ–ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಸಂಗೀತ (ವಿಶೇಷವಾಗಿ ಶಾಸ್ತ್ರೀಯ ಸಂಗೀತ) ಕುರಿತು ವಿದ್ವತ್‌ಪೂರ್ಣ ಭಾಷಣಗಳನ್ನು ಮತ್ತು ಕಲಾ ಪ್ರದರ್ಶನವನ್ನು ನೀಡಿದ್ದಾರೆ. ದೇಶೀಯ ಮತ್ತು ಪಾಶ್ಚಾತ್ಯ ಸಂಗೀತ ಪ್ರಕಾರಗಳ ಕಲಾ ಸಾಧಕರಾಗಿ ಅನನ್ಯ ಸೇವೆ ಸಲ್ಲಿಸಿದ್ದ ಇವರು **"**ಜಯಚಾಮರಾಜೇಂದ್ರ ಗ್ರಂಥರತ್ನಮಾಲೆ**"** ಮೂಲಕ ವೇದ–ಪುರಾಣ, ಶಾಸ್ತ್ರ–ಉಪನಿಷತ್ತು, ಇತಿಹಾಸ–ಚರಿತ್ರೆಯ ಗ್ರಂಥಗಳನ್ನು ಜನಸಾಮಾನ್ಯರಿಗೆ ಅರ್ಥೈಸುವ ಸಲುವಾಗಿ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದರು. ಅಲ್ಲದೇ ಇವರೇ ಸ್ವತಃ ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು; ದಿ ರಿಲಿಜನ್ ಅಂಡ್ ದಿ ಮ್ಯಾನ್, ಆತ್ಮ ಮತ್ತು ಬ್ರಹ್ಮ, ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್, ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ಭಾರತೀಯ ಸೌಂದರ್ಯಶಾಸ್ತ್ರದ ಹಲವು ಮುಖಗಳು, ಇತ್ಯಾದಿ.

**ಮಹಾರಾಜರಾಗಿ ಪಟ್ಟಾಭಿಷೇಕ**

ಬಾಲ್ಯದಿಂದಲೂ ರಾಜಮನೆತನದ ವಾತಾವರಣ ಹಾಗೂ ತಮ್ಮ ದೊಡ್ಡಪ್ಪ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಮಾರ್ಗದರ್ಶನದಲ್ಲಿ ಬೆಳೆದ ಇವರು ಸಾಕಷ್ಟು ಆಡಳಿತಾತ್ಮಕ ವಿಚಾರಗಳನ್ನು ಮತ್ತು ತಂತ್ರಗಳನ್ನು ಪ್ರಾಯೋಗಿಕವಾಗಿ ಕಲಿತಿದ್ದರು. ನಂತರ **ಮೆರಿಯರ್ ಎಲ್ವಿನ್** *(ಬ್ರಿಟಿಷ್ ಮೂಲದ ಜನಾಂಗಶಾಸ್ತ್ರಜ್ಞ, ಮಾನವಶಾಸ್ತ್ರಜ್ಞ, ಬುಡಕಟ್ಟು ಕಾರ್ಯಕರ್ತ ಮತ್ತು ಜವಾಹರ್‌ಲಾಲ್ ನೆಹರು ಸರ್ಕಾರದಲ್ಲಿ ಈಶಾನ್ಯ ಭಾರತ ಬುಡಕಟ್ಟು ವ್ಯವಹಾರಗಳ ಸಲಹೆಗಾರ)* ಮತ್ತು **ಇನಾಯತುಲ್ಲಾ ಮೆಕ್ರೀ** *(ನಿಸ್ವಾರ್ಥಿ ಉದ್ಯಮಿ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕರ್ನಾಟಕದ ನಾಗರಿಕ ಮತ್ತು ಮಿಲಿಟರಿ ಕೇಂದ್ರದ ಮುನ್ಸಿಪಲ್ ಕಮಿಷನರ್)* ಅವರಿಂದ ಆಡಳಿತ ನಿರ್ವಹಣೆಯಲ್ಲಿ ವಿಶೇಷ ತರಬೇತಿ ಪಡೆದರು. ದೇಶ–ವಿದೇಶಗಳ ಸಂಚಾರ ಮಾಡಿ ಸಾಕಷ್ಟು ದೇಶಗಳ ಸರ್ಕಾರ ಮತ್ತು ಆಡಳಿತದ ಕಾರ್ಯವೈಖರಿಯ

ಪ್ರಾಯೋಗಾತ್ಮಕ ಅನುಭವ ಪಡೆದ ಇವರು ತಮ್ಮ ಆಡಳಿತಾವಧಿಯಲ್ಲಿ ನೈಜ ಪ್ರಜಾತಂತ್ರ ವ್ಯವಸ್ಥೆ ಸ್ಥಾಪನೆಯ ಪಥದಲ್ಲಿ ಅಧಿಕಾರ ಚಲಾಯಿಸಿದರು. ಜಯಚಾಮರಾಜೇಂದ್ರ ಒಡೆಯರ್ ಅವರು ಮಾರ್ಚ್ 28, 1940ರಂದು ಮೈಸೂರು ರಾಜ ಸಂಸ್ಥಾನದ ಯುವರಾಜನಾಗಿ, ನಂತರ ಸೆಪ್ಟೆಂಬರ್ 08, 1940ರಂದು ಮಹಾರಾಜರಾಗಿ ಪಟ್ಟಾಭಿಷಕ್ತರಾದರು.

**ಮಹಾರಾಜ ಜಯಚಾಮರಾಜೇಂದ್ರ ಒಡೆಯರವರ ಅಭಿವೃದ್ಧಿ ಆಡಳಿತ ಉಪಕ್ರಮಗಳು**

'ವಿಶಾಲ ಕರ್ನಾಟಕದ ರಚನೆ'ಯ ಕನಸು ಕಂಡಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ತಮ್ಮ ಪೂರ್ವಾಧಿಕಾರಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ 'ಆದರ್ಶರಾಜ್ಯ'ದ ಪಥದಲ್ಲಿಯೇ ಆಡಳಿತ ನಡೆಸಿದರು. ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಹಾಗೂ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೊಳಿಸಿದರು. ಇವರ ಆಡಳಿತದ ಅವಧಿಯಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತು ಆಹಾರದ ಕೊರತೆ ತಲೆದೋರಿತ್ತು. ಇಂತಹ ಬಿಕ್ಕಟ್ಟುಗಳನ್ನು ನಿವಾರಿಸುವ ಸಲುವಾಗಿ ಒಡೆಯರ್ ಅವರು ಜವಾಬ್ದಾರಿಯುತ ಸರ್ಕಾರವನ್ನು ರಚಿಸಲು ಕ್ರಮ ಕೈಗೊಂಡರು. ಸಂಸ್ಥಾನದ ಸರ್ವತೋಮುಖ ಪ್ರಗತಿಯಲ್ಲೇ ತಮ್ಮ ಸಾರ್ವಜನಿಕ ಜೀವನದ ಸಾರ್ಥಕತೆಯನ್ನು ಕಂಡುಕೊಂಡಿದ್ದರು. ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾನಸಭೆ, ನಗರಾಭಿವೃದ್ಧಿ ವಿಶ್ವಸ್ಥಮಂಡಳಿ, ನಗರಸಭೆ, ಎಲ್ಲವೂ ರಾಜ್ಯಾಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವ ಉಪಕ್ರಮಗಳಾಗಿದ್ದವು. ಸ್ವಸ್ಥಸಮಾಜದ ನಿರ್ಮಾಣ ಮತ್ತು ಸಾಮಾಜಿಕ ನ್ಯಾಯ ಪರಿಕಲ್ಪನೆಯುಳ್ಳ ಇವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಾಜಕೀಯ ಮತ್ತು ಅಡಳಿತ ಕ್ಷೇತ್ರದಲ್ಲಿ ಮೀಸಲಾತಿಯನ್ನು ಕಲ್ಪಿಸಿ ತಳಸಮುದಾಯದವರು ಆಡಳಿತ ಪ್ರಕಿಯೆಯಲ್ಲಿ ಭಾಗವಹಿಸಲು ಮತ್ತು ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶ ಕಲ್ಪಿಸಿದರು. ಒಡೆಯರ್ ಅವರು ಮೈಸೂರು ರಾಯಲ್ ಅಸೆಂಬ್ಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಕೆಳಮನೆಯಲ್ಲಿ 30ಸ್ಥಾನಗಳನ್ನು ಹಾಗೂ ಮೇಲ್ಮನೆಯಲ್ಲಿ 04 ಸ್ಥಾನಗಳನ್ನು ಮೀಸಲಿಟ್ಟರು.

ಪರಿಸರ ಹಾಗೂ ವನ್ಯ ಪ್ರಾಣಿಗಳ ಬಗ್ಗೆ ವಿಶೇಷ ಕಾಳಜಿಯುಳ್ಳ ಮಹಾರಾಜರು ಅರಣ್ಯೀಕರಣಕ್ಕಾಗಿ ಗ್ರಾಮಗಳಲ್ಲಿ, ರಸ್ತೆ ಬದಿಗಳಲ್ಲಿ ಮತ್ತು ಬೀಡು ಭೂಮಿಗಳಲ್ಲಿ ಗಿಡಗಳನ್ನು ನೆಟ್ಟು, ತೋಪು ಬೆಳೆಸುವುದಕ್ಕೆ ಮಹತ್ವ ನೀಡಿದರು. ಮೈಸೂರು ನಗರದಲ್ಲಿನ ರಾಜಮನೆತನಕ್ಕೆ ಸೇರಿದ ಮೃಗಾಲಯವನ್ನು ಸರ್ಕಾರದ ಅಧೀನಕ್ಕೆ ವಹಿಸಿಕೊಟ್ಟು ಅದರ ಬೆಳವಣಿಗೆಗೆ ಕಾರಣರಾದರು. ಈ ನೆನಪಿಗಾಗಿ ಈ ಮೃಗಾಲಯಕ್ಕೆ 'ಶ್ರೀ ಚಾಮರಾಜೇಂದ್ರ ವನ್ಯಜೀವಿ ಉದ್ಯಾನವನ' ಎಂದು ಹೆಸರಿಡಲಾಗಿದೆ. ಭಾರತೀಯ ವನ್ಯಜೀವಿ ಮಂಡಳಿಯ ಪ್ರಥಮ ಅಧ್ಯಕ್ಷರಾಗಿಯೂ ಕೂಡ ಸೇವೆಸಲ್ಲಿಸಿದ್ದಾರೆ. ಶಿಕ್ಷಣದ ಅಗತ್ಯತೆ ಮತ್ತು ಮಹತ್ವವನ್ನು ಅರಿತಿದ್ದ ಮಹಾರಾಜರು ಅನೇಕ ಶಿಕ್ಷಣ ಸಂಸ್ಥೆಗಳನ್ನು ವಿಶೇಷವಾಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಜೊತೆಗೆ ಶಿಕ್ಷಣ ಕೇಂದ್ರಗಳಿಗೆ ಅರಮನೆಗೆ ಸೇರಿದ ಹಲವು ಕಟ್ಟಡಗಳನ್ನು ಹಾಗೂ ಆಸ್ತಿಯನ್ನು ದಾನ ಮಾಡಿದರು. ವಯಸ್ಕರಿಗೂ ಶಿಕ್ಷಣ ನೀಡಲು 'ನೈಟ್‌ಸ್ಕೂಲ್'ಗಳನ್ನು ಸ್ಥಾಪಿಸಿದರು. ಗ್ರಾಮಸ್ಥರು ಹಾಗೂ ಯುವಜನತೆಯ ಜ್ಞಾನಾರ್ಜನೆಗೆ ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಯಿತು. ಉತ್ತಮ ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗೆ ಶಿಕ್ಷಣ ಮತ್ತು ಸಂಸ್ಕೃತಿಗಳೇ ಮೂಲ ಕಾರಣ ಎಂಬ

ನಂಬಿಕೆಯನ್ನು ಹೊಂದಿದ್ದ ಒಡೆಯರು ಸಂಸ್ಥಾನದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಹೆಚ್ಚಿನ ಶ್ರಮ ವಹಿಸಿದರು. ಭರತ ವರ್ಷದ ಸಾಹಿತ್ಯ, ಇತಿಹಾಸ, ತತ್ವಶಾಸ್ತ್ರ, ವಿಜ್ಞಾನ, ಸಂಗೀತ, ಸಾಹಿತ್ಯ ವ್ಯಾಸಂಗದೊಡನೆ ಪಾಶ್ಚಾತ್ಯ ದೇಶಗಳ ಧ್ಯೇಯ ಮತ್ತು ಆದರ್ಶಗಳನ್ನು ಸಮೀಕರಿಸಬೇಕೆಂಬುದು ಒಡೆಯರ್ ಅವರ ಧ್ಯೇಯವಾಗಿತ್ತು. ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಪ್ರಾಶಸ್ತ್ಯ ನೀಡಿ ಕೆರೆ–ಕಟ್ಟೆಗಳನ್ನು ಅಭಿವೃದ್ಧಿ ಪಡಿಸಿ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ಶುದ್ಧ ನೀರಿನ ವ್ಯವಸ್ಥೆ ನಿರ್ಮಿಸಿದರು. ಪ್ರಜೆಗಳ ಆರೋಗ್ಯ ಕ್ಷೇತ್ರವನ್ನು ಕಡೆಗಣಿಸದೆ ಗ್ರಾಮೀಣ ಪ್ರದೇಶಗಳಲ್ಲಿ ಔಷಧಾಲಯಗಳನ್ನು ಮತ್ತು ತಾಲ್ಲೂಕು ಮಟ್ಟದಲ್ಲಿ ಆಸ್ಪತ್ರೆಗಳನ್ನು ಆರಂಭಿಸಿದರು.

ಭೂರಹಿತ ಕಾರ್ಮಿಕರಿಗೆ, ಶೋಷಿತರಿಗೆ, ದಮನಿತರಿಗೆ ದರಕಾಸ್ತು ಜಮೀನು ನೀಡಿ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಿದರು. ಕೃಷಿ ಕಾರ್ಯಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳಲು ಉತ್ತೇಜಿಸಿ ಪ್ರತಿಯೊಂದು ಪಟ್ಟಣದಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿದರು. ರೈತರ ಅಭಿವೃದ್ಧಿಯ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿದ್ದ ಇವರು ಕಬ್ಬು ಬೆಳೆಗೆ ಹರಡುತ್ತಿದ್ದ 'ನುಸಿ ರೋಗ'ದ ನಿವಾರಣೆಗೆಂದು ಮಂಡ್ಯದ ಬಳಿ ಪ್ಯಾರೋಸೈಟ್ ಲ್ಯಾಬರೋಟರಿಯನ್ನು 1946–47ರಲ್ಲಿ ಪ್ರಾರಂಭಿಸಿದರು. ಈ ರೀತಿ ರೈತರಿಗೆ ಪ್ರಯೋಗಾಲಯದ ಸ್ಥಾಪನೆಯ ಪರಿಕಲ್ಪನೆಯು ಭಾರತದಲ್ಲಿ ಪ್ರಥಮ ಎಂಬುವುದು ವಿಶೇಷವಾದುದಾಗಿದೆ. ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಯುವಕರಿಗೆ ಉದ್ಯೋಗವಕಾಶ ಒದಗಿಸಲು ಗುಡಿ–ಕೈಗಾರಿಕೆಗಳನ್ನು ಪ್ರೋತ್ಸಾಹಿಸಿದರು. ಜೊತೆಗೆ ಮಧ್ಯಮ ಮತ್ತು ಬಡವರ್ಗದವರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಹಾಗೂ ಅವರಿಗೆ ಉದ್ಯೋಗವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ದೊಡ್ಡ ಪ್ರಮಾಣದ ಉದ್ಯಮಗಳ ಸ್ಥಾಪನೆಗೂ ಹಾಗೂ ದೇಶೀಯ ಕರಕುಶಲಕಲೆಗಳಿಗೂ ಸರ್ವಪ್ರಕಾರದಲ್ಲಿ ಉತ್ತೇಜನವನ್ನು ನೀಡಿದರು. ಯುರೋಪಿಯನ್ ದೇಶಗಳಲ್ಲಿ ನಡೆಯುತ್ತಿದ್ದ ವ್ಯವಸ್ಥಿತ ಹೈನುಗಾರಿಕೆ ಮಾದರಿಯಲ್ಲಿಯೇ ಇಲ್ಲಿನ ಗ್ರಾಮಗಳಲ್ಲಿ ಹಸು, ಕುರಿ, ಕೋಳಿ ಸಾಕಾಣಿಕೆ ಮಾಡಲು ವ್ಯವಸ್ಥೆ ಮಾಡಲಾಯಿತು. ಗ್ರಾಮಗಳಲ್ಲಿಯೇ ಡೈರಿ ಘಟಕಗಳನ್ನು ತೆರೆಯಲಾಯಿತು. ಪಶುಗಳಿಗಾಗಿಯೇ ಪ್ರತ್ಯೇಕ ವೈದ್ಯಕೀಯ ಆಸ್ಪತ್ರೆಗಳನ್ನು ಪಟ್ಟಣ–ತಾಲ್ಲೂಕು ಮಟ್ಟದಲ್ಲಿ ತೆರೆಯಲಾಯಿತು[1].

ಇವರ ಪೂರ್ವಾಧಿಕಾರಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1939 ಫೆಬ್ರವರಿ 05ರಂದು ಜೋಗ ಜಲಪಾತದ ಬಳಿ ಶರಾವತಿ ನದಿಯಿಂದ ವಿದ್ಯುತ್ ಉತ್ಪಾದನೆಗಾಗಿ ಶಿಲನ್ಯಾಸ ಮಾಡಿದರು. ಅದು ಜಯಚಾಮರಾಜೇಂದ್ರ ಒಡೆಯರ್ ಕಾಲದಲ್ಲಿ ಪೂರ್ಣಗೊಂಡಿತು. ಈ ಜಲವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಆರಂಭದಲ್ಲಿ 1ನೇ ಕೃಷ್ಣರಾಜೇಂದ್ರ ಒಡೆಯರ್ ಅವರ ಹೆಸರನ್ನು ಇಡಲಾಗಿತ್ತು. ಆದರೆ ತದನಂತರ ಗಾಂಧೀಜಿಯವರ ಮೇಲೆ ಇದ್ದ ಅಪಾರವಾದ ಅಭಿಮಾನದಿಂದ ಈ ಜಲಾಶಯಕ್ಕೆ "ಮಹಾತ್ಮ ಗಾಂಧಿ ಜಲವಿದ್ಯುತ್ ಉತ್ಪಾದನಾ ಕೇಂದ್ರ" ಎಂದು ಮರುನಾಮಕರಣ ಮಾಡಲಾಯಿತು. ಇದು ಅವರ ಸಜ್ಜನಿಕೆಗೆ ಸಹೃದಯ ವೈಶಾಲ್ಯತೆಗೆ ಸಾಕ್ಷಿಯಾಗಿದೆ. ಫೆಬ್ರವರಿ 21, 1947ರಂದು ನಾಡಿನ ಹಿತಕ್ಕಾಗಿ ಶರಾವತಿಯಿಂದ ವಿದ್ಯುತ್ ಹರಿಯಿತು. ಇವರು ತಮ್ಮ ಆಡಳಿತದ ಅವಧಿಯಲ್ಲಿ ಹಲವಾರು ಜಲಾಶಯಗಳನ್ನು, ಕೆರೆ–ಕಟ್ಟೆಗಳನ್ನು, ಕಾಲುವೆಗಳ ಸೇತುವೆಗಳನ್ನು ನಿರ್ಮಿಸಿ ಕೃಷಿ ಕೈಗಾರಿಕೆಗಳಿಗೆ ಸಾಕಷ್ಟು ನೀರಾವರಿ ಸೌಲಭ್ಯವನ್ನು ಕಲ್ಪಿಸಿದರು. ನಾಲ್ವಡಿಯವರ ಕಾಲದಲ್ಲಿ ಪ್ರಾರಂಭವಾಗಿದ್ದ ಅಂಜನಾಪುರ ಜಲಾಶಯ, ಭೀಮನಹಳ್ಳಿ

ಜಲಾಶಯ, ಮಾರ್ಕೋನಹಳ್ಳಿ ಜಲಾಶಯ, ನೆಲ್ಲಿಗೆರೆ ಜಲಾಶಯ, ಗೋಪಾಲಪುರ ಜಲಾಶಯ ಇವುಗಳ ವಿಸ್ತರಣಾ ಕಾರ್ಯಕ್ಕೆ ಆದ್ಯತೆಯನ್ನು ನೀಡಲಾಯಿತು. ಲಕ್ಕವಳ್ಳಿ ಬಳಿ ಭದ್ರಾ ಜಲಾಶಯ, ಹೆಗ್ಗಡದೇವನಕೋಟೆ ಬಳಿ ನುಗು ಜಲಾಶಯ, ಹೊಸಪೇಟೆಯ ಬಳಿ ಬೈರಮಂಗಲ ಜಲಾಶಯ, ಚನ್ನಪಟ್ಟಣದ ಕನ್ನಮಂಗಲ ಜಲಾಶಯ ನಿರ್ಮಾಣದ ಕಾರ್ಯ ಹೊಸದಾಗಿ ಪ್ರಾರಂಭವಾದವು ಮತ್ತು 1948ರಲ್ಲಿ ಹಿರೇಭಾಸ್ಕರ ಅಣೆಕಟ್ಟು ಮತ್ತು ಕಾರ್ಗಲ್ ಅಣೆಕಟ್ಟುಗಳು ಪೂರ್ಣಗೊಂಡವು. ಕುಣಿಗಲ್ ತಾಲ್ಲೂಕು ಹೊನ್ನಮಾಚನಹಳ್ಳಿ ಕೆರೆ, ಬೌರಿಂಗ್ ಪೇಟೆ ಬಳಿ ಮಾರ್ಕಂಡೇಯ ಕೆರೆ, ಚಳ್ಳಕೆರೆ ಬಳಿ ಪರಶುರಾಮಪುರ ಕೆರೆ, ಮೊಳಕಾಲ್ಮೂರು ಪುಗತ್ತಿಕೆರೆ ನಿರ್ಮಾಣಕಾರ್ಯ ಪ್ರಾರಂಭವಾದವು.

ಒಡೆಯರ್ ಅವರು ಕಟ್ಟಡಗಳ ಪುನರ್ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ಮೈಸೂರು ನಗರ ಪುರಸಭೆ, ನಗರಾಭಿವೃದ್ಧಿ ಸಭೆಗಳನ್ನು ಪರಿಷ್ಕರಣೆಗೊಳಿಸುವ ಕಾರ್ಯಗಳನ್ನು ಕೈಗೊಂಡರು. ಮೈಸೂರು ನಗರದಲ್ಲಿ ರೈಲ್ವೆ ಇಲಾಖೆಯ ಕೇಂದ್ರ ಕಚೇರಿ, ಹೊಸ ಕೇಂದ್ರ ಅಂಚೆ ಕಚೇರಿ, ಕೃಷ್ಣರಾಜೇಂದ್ರ ಆಸ್ಪತ್ರೆಯ ನರ್ಸಗಳಿಗಾಗಿ ವಸತಿ ನಿಲಯಗಳು, ಮೈಸೂರು ದೇವರಾಜ ಮಾರುಕಟ್ಟೆಯ ಪಶ್ಚಿಮಭಾಗದಲ್ಲಿ ಹೆಚ್ಚುವರಿ ಅಂಗಡಿ ಮಳಿಗೆಗಳು ನಿರ್ಮಾಣಗೊಂಡವು. ಮೈಸೂರು ನಗರದ ಪ್ರಮುಖ ವೃತ್ತದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಮೃತ ಶಿಲಾಪ್ರತಿಮೆಯ ಸ್ಥಾಪನೆಯು ಜಯಚಾಮರಾಜರಿಗೆ ತಮ್ಮ ಹಿರಿಯರ ಬಗ್ಗೆ ಇದ್ದ ಗೌರವಕ್ಕೆ ಸಾಕ್ಷಿಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಎಂ.ವಿ.ಗೋಪಾಲಸ್ವಾಮಿ ಅವರು ಮೈಸೂರು ನಗರದಲ್ಲಿ ಖಾಸಗಿಯಾಗಿ ಪ್ರಾರಂಭಿಸಿದ್ದ ಆಕಾಶವಾಣಿಯನ್ನು 1942ರ ಜನವರಿ 01ರಿಂದ ಮಹಾರಾಜರ ಸರಕಾರವೇ ವಹಿಸಿಕೊಂಡದ್ದು ವಿಶೇಷ. 1944ರಲ್ಲಿ ಬೆಂಗಳೂರಿನಲ್ಲಿ ಹೊಸದಾಗಿ ಕ್ಷಯರೋಗದ ಆಸ್ಪತ್ರೆಯನ್ನು, 1943ರಲ್ಲಿ ಶ್ರೀ ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆ ಮತ್ತು ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಶನಲ್ ಇನ್ಸ್ಟಿಟ್ಯೂಟ್‌ಗಳನ್ನು ಪ್ರಾರಂಭಿಸಿದರು. ಜೊತೆಗೆ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಬೆಳವಣಿಗೆಗೆ ಆದ್ಯತೆ ನೀಡಿದರು. ಸಾರ್ವಜನಿಕ ಉಪಯೋಗಕ್ಕಾಗಿ ರಾಜಮನೆತನದ ಅನೇಕ ಕಟ್ಟಡಗಳನ್ನು ಹಾಗೂ ಸಾಕಷ್ಟು ಆಸ್ತಿ–ಪಾಸ್ತಿಯನ್ನು ದಾನ ಮಾಡಿದರು. ಉದಾ:– ಕೇಂದ್ರೀಯ ಆಹಾರ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಇತ್ಯಾದಿ. ಈ ರೀತಿಯಾಗಿ ಜಯಚಾಮರಾಜೇಂದ್ರ ಒಡೆಯರ್ ಅವರು ಅಭಿವೃದ್ಧಿ ಕಾರ್ಯಗಳನ್ನು ಮತ್ತು ಆಡಳಿತದ ಸುಧಾರಣೆಗಳನ್ನು ಕೈಗೊಂಡು ಮೈಸೂರು ಸಂಸ್ಥಾನವನ್ನು ಪ್ರಗತಿಪಥದಲ್ಲಿ ಮುನ್ನಡೆಸಿದರು.

**ಪಂಚವಾರ್ಷಿಕ ಯೋಜನೆಯ ಪಿತಾಮಹ**

ಉತ್ತಮ ರಾಜನೀತಿಜ್ಞ, ಆಡಳಿತಗಾರ, ತತ್ವಜ್ಞಾನಿ, ಅರ್ಥಶಾಸ್ತ್ರಜ್ಞ ಹಾಗೂ ದೂರದರ್ಶಿಯಾದ ಜಯಚಾಮರಾಜೇಂದ್ರ ಒಡೆಯರ್ ಅವರು ಮೈಸೂರು ರಾಜ್ಯದಲ್ಲಿ ಗ್ರಾಮಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವಂತಹ ಪಂಚವಾರ್ಷಿಕ ಯೋಜನೆಯನ್ನು 1942ರಲ್ಲಿ ಜಾರಿಗೊಳಿಸಿದರು. ಭಾರತದಲ್ಲಿ ಮೊದಲ ಬಾರಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ದೇಶಕ್ಕೆ ಮಾದರಿಯಾಗುವಂತ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದ ಹಿರಿಮೆ ಮಹಾರಾಜರಿಗೆ ಸಲ್ಲುತ್ತದೆ. ಗ್ರಾಮೀಣ ಪ್ರದೇಶದ ಪುನರ್‌ರಚನೆ ಕಾರ್ಯಕ್ರಮಗಳಿಗೆ ಈ ಯೋಜನೆಯಡಿ ಸುಮಾರು 35ಕೋಟಿ ರೂ.

ಅನುದಾನವನ್ನು ಕಾಯ್ದಿರಿಸಲಾಯಿತು. ಪ್ರತಿ ವರ್ಷ ಪ್ರತಿ ತಾಲ್ಲೂಕಿನಿಂದ ಒಂದೊಂದು ಗ್ರಾಮವನ್ನು ಗುರುತಿಸಿ ಈ ಎಲ್ಲಾ ಗ್ರಾಮಗಳನ್ನು ಕೇಂದ್ರೀಕರಿಸುವುದರ ಮೂಲಕ ಅವುಗಳಿಗೆ ಸಂಬಂಧಿಸಿದಂತೆ ಕುಡಿಯುವ ನೀರು, ಬಾವಿ ತೋಡುವುದು, ರಸ್ತೆ ನಿರ್ಮಾಣ, ನೆಡುತೋಪುಗಳು, ಗ್ರಂಥಾಲಯಗಳು, ಶಾಲೆಗಳು, ಗ್ರಾಮೀಣ ಗೃಹ ಕೈಗಾರಿಕೆಗಳು, ಕೃಷಿ ಸಂಬಂಧಿತ ಡಿಪೋಗಳು, ಅಭಿವೃದ್ಧಿ ಸಹಕಾರ ಸಂಘಗಳು, ಪಶುವೈದ್ಯಾಲಯಗಳು, ಸುಧಾರಿತ ಗೋಮಾಳಗಳು, ದೇವಾಲಯಗಳ ರಿಪೇರಿ, ಇನ್ನೂ ಮುಂತಾದ ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಈ ರೀತಿ 5 ವರ್ಷಗಳಲ್ಲಿ ಸಂಸ್ಥಾನದ ಎಲ್ಲಾ ಗ್ರಾಮಗಳನ್ನು ಅಭಿವೃದ್ಧಿಗೊಳಿಸುವ ಯೋಜನೆಗಳ ನೀಲಿ ನಕಾಶೆಯನ್ನು ಮಹಾರಾಜರು ರೂಪಿಸಿದರು. ಇದನ್ನು ಕಾರ್ಯಗತಗೊಳಿಸಲು 'ಗ್ರಾಮ ಸುಧಾರಕರು' ಎಂಬ ಹೆಸರಲ್ಲಿ ಸ್ವಯಂ ಸೇವಕರನ್ನು ನೇಮಿಸಿದರು.

ಈ ರೀತಿಯಾಗಿ ಸರ್ವತೋಮುಖ ಗ್ರಾಮೋದ್ಧಾರಕ್ಕಾಗಿ ದೇಶದಲ್ಲಿಯೇ ಮೊಟ್ಟಮೊದಲಿಗೆ ಪಂಚವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಿ 'ಆದರ್ಶ ಗ್ರಾಮದ ಪರಿಕಲ್ಪನೆಯನ್ನು' ಸ್ವಾತಂತ್ರ್ಯ ಪೂರ್ವದಲ್ಲಿಯೇ ಜಾರಿಗೆ ತಂದ ಮಹಾರಾಜರು ಮಹಾತ್ಮಗಾಂಧಿ ಹೇಳಿದ "ಗ್ರಾಮೋದ್ಧಾರವೇ ದೇಶೋದ್ಧಾರ" ಎಂಬ ಮಾತನ್ನು ಪ್ರಾಯೋಗಿಕವಾಗಿ ಅರ್ಥೈಸಿದರು. ಇಂತಹ ಯೋಜನಾ ಮಾದರಿಯನ್ನು ಸ್ವಾತಂತ್ರ್ಯದ ನಂತರ, ಭಾರತದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರು 1952ರಲ್ಲಿ, ಅಂದರೆ ಮಹಾರಾಜರು ಜಾರಿಗೆತಂದ 10 ವರ್ಷಗಳ ಬಳಿಕ ಭಾರತ ದೇಶದಲ್ಲಿ ಅನುಷ್ಠಾನಗೊಳಿಸಿದರು ಎಂಬುದೇ ವಿಶೇಷ.

**ಸಾಮಾಜಿಕ ನ್ಯಾಯ ಸ್ಥಾಪನೆ**

ದೊಡ್ಡಪ್ಪ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಗರಡಿಯಲ್ಲಿ ಬೆಳೆದ ಮಹಾರಾಜರು 'ಸಾಮಾಜಿಕ ನ್ಯಾಯ'ದ ಪ್ರಗತಿರಥವನ್ನು ಸರಾಗವಾಗಿ ಮುನ್ನಡೆಸಿದರು. ಎಲ್ಲಾ ವರ್ಗದವರಿಗೂ ಎಲ್ಲಾ ಅವಕಾಶಗಳನ್ನು ಮತ್ತು ನ್ಯಾಯ ಪರಿಹಾರಗಳು ದೊರಕುವಂತೆ ಮಾಡಲು ಪ್ರಯತ್ನಿಸಿದರು. ಸಮಸಮಾಜದ ನಿರ್ಮಾಣಕ್ಕೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹಾಗೂ ದುರ್ಬಲರಿಗೆ ರಾಜಕೀಯ ಮತ್ತು ಆಡಳಿತ ಕ್ಷೇತ್ರದಲ್ಲಿ ಮೀಸಲಾತಿಯನ್ನು ಕಲ್ಪಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜೇಂದ್ರ ಒಡೆಯರ್ ಅವರ ಆಡಳಿತ ಕಾಲದಲ್ಲಿ 'ಪಂಚಮ'ರೆಂದು ಕರೆಯುತ್ತಿದ್ದ 'ಹರಿಜನ'ರ ಕಲ್ಯಾಣ ಕಾರ್ಯಗಳು ಪ್ರಗತಿ ಪಥದಲ್ಲಿ ನಡೆದವು. ದುರ್ಬಲರ, ಹಿಂದುಳಿದವರ ಹಾಗೂ ಶೋಷಿತರ ಅಭಿವೃದ್ಧಿ ಮತ್ತು ಸಮಾನತೆಯ ಸಾಧನೆಯಿಂದ ಮಾತ್ರ ಸಾಮರಸ್ಯದ ಸಮಸಮಾಜ ನಿರ್ಮಾಣ ಸಾಧ್ಯವೆಂದು ಜಯಚಾಮರಾಜೇಂದ್ರ ಒಡೆಯರ್ ಅವರು ಮನಗಂಡಿದ್ದರು. ಆದ್ದರಿಂದ ತಮ್ಮ ಅಧಿಕಾರವಧಿಯಲ್ಲಿ ಹರಿಜನರ ಸರ್ವತೋಮುಖ ಕಲ್ಯಾಣಕ್ಕೆ ಶ್ರಮಿಸಿ ಎಲ್ಲರಂತೆ ಅವರಿಗೂ ಸಾರ್ವಜನಿಕ ಸ್ಥಳಗಳಾದ ಕೆರೆ–ಕಟ್ಟೆ, ಉದ್ಯಾನವನ, ದೇವಾಲಯ, ಅರಮನೆ (ವಿಶೇಷವಾಗಿ ದರ್ಬಾರ್ ಸಭಾಂಗಣ) ಮುಂತಾದವುಗಳಿಗೆ ಮುಕ್ತ ಪ್ರವೇಶ ಕಲ್ಪಿಸಿದರು.

ಸಂಸ್ಥಾನದ ಪೌರಕಾರ್ಮಿಕರಿಗೆ ಉಚಿತ ವಸತಿ ಸೌಲಭ್ಯವನ್ನು ಕಲ್ಪಿಸಿ ಆರ್ಥಿಕವಾಗಿ ಸದೃಢಗೊಳಿಸಿದರು. ಕೆಲಸದ ಸಂದರ್ಭದಲ್ಲಿ ಅಪಘಾತಕ್ಕೀಡಾದ ಕೂಲಿ–ಕಾರ್ಮಿಕರಿಗೆ ತಕ್ಷಣವೇ ಪರಿಹಾರ

ನೀಡುವ ಕಾನೂನು ರೂಪಿಸಿದರು. ಯಾವುದೇ ರೀತಿಯ ಸರಕಾರಿ ಸೇವೆಯಲ್ಲಿರುವ ಹಾಗೂ ಕೂಲಿ ಕೆಲಸ ಮಾಡುವ ಗರ್ಭಿಣಿ ಮಹಿಳೆಯರಿಗೆ ನೀಡುತ್ತಿದ್ದ ಉಚಿತ ವೈದ್ಯಕೀಯ ಸೌಲಭ್ಯ ಹಾಗೂ ಶುಶ್ರೂಷೆ ರಜಾ ಮುಂತಾದ ಸೌಲಭ್ಯಗಳನ್ನು ಗಣಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ವಿಸ್ತರಿಸಿದರು. ಒಡೆಯರ್ ಅವರು ದುರ್ಬಲರಿಗೆ, ಅಂಗವಿಕಲರಿಗೆ, ಭಿಕ್ಷುಕರಿಗೆ, ನಿರಾಶ್ರಿತರಿಗೆ ಮತ್ತು ಸಂತ್ರಸ್ತೆಯರಿಗಾಗಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿದರು. ಈ ಮೂಲಕ ಅವರಿಗೂ ಸಾಮಾನ್ಯರಂತೆ ಬದುಕುವ ಅವಕಾಶ ಕಲ್ಪಿಸಿದರು. ಬೆಂಗಳೂರಿನ ಸಮ್ಮನಹಳ್ಳಿಯಲ್ಲಿ ಭಿಕ್ಷಾಟನ ನಿರ್ಮೂಲನಾ ಕೇಂದ್ರವನ್ನು ಸ್ಥಾಪಿಸಿದರು ಮತ್ತು ಲಂಬಾಣಿ ಸಮುದಾಯಕ್ಕೆ ರಾಯಲ್ ಅಸೆಂಬ್ಲಿ ಗೌರವ ನೀಡಿ ಸಮ ಸಮಾಜದ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು. ಅಪರಾಧ ಮಾಡಿ ಬಂಧಿತರಾದ ಖೈದಿಗಳನ್ನು 'ಪರಿಸ್ಥಿತಿಯ ಶಿಶು' ಎಂದು ಪರಿಗಣಿಸಿ, ಅವರ ಮನಃಪರಿವರ್ತನೆಗೆ ಯುರೋಪಿನ ಮಾದರಿಯ ಪುನಶ್ಚೇತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಇಂತಹ ಪ್ರಯತ್ನ ಭಾರತ ದೇಶದಲ್ಲೇ ಮೊದಲು. ಜೊತೆಗೆ ಖೈದಿಗಳಿಗೂ ಸಮಾಜದಲ್ಲಿ ಗೌರವಯುತ ಜೀವನ ನಡೆಸಲು ಅವಕಾಶ ಕಲ್ಪಿಸಿ, ಸಾಮಾಜಿಕ ಲೋಕೋಪಯೋಗಿ ಕಾರ್ಯಗಳಲ್ಲಿ ಬಳಸಿಕೊಂಡರು. ಬಿಡುಗಡೆ ಹೊಂದಿದ ಬಂಧಿಗಳು ಗೌರವಯುತವಾಗಿ ಜೀವನ ನಡೆಸಲಿ ಎಂಬ ಉದ್ದೇಶದಿಂದ 'ಮುಕ್ತ ಬಂಧಿಗಳ ಸಹಾಯ ಸಂಘ'ವನ್ನು ಸ್ಥಾಪಿಸಿದರು. ಇಂತಹ ಪ್ರಯತ್ನ ಕೂಡ ಭಾರತದಲ್ಲೇ ಮೊದಲು ಎಂಬುದೇ ಹಿರಿಮೆ.

**ರಾಜತಂತ್ರದಿಂದ ಪ್ರಜಾತಂತ್ರದೆಡೆಗೆ**

ರಾಜತಂತ್ರ ಮತ್ತು ಪ್ರಜಾತಂತ್ರ ಎರಡನ್ನೂ ಸಮಮನಸ್ಸಿನಿಂದ ಅನುಭವಿಸಿದ ಅಪರೂಪದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್. ಸೆಪ್ಟೆಂಬರ್ 08, 1940ರಂದು ಮೈಸೂರು ರಾಜ ಸಂಸ್ಥಾನದ ಮಹಾರಾಜರಾಗಿ ಪಟ್ಟಾಭಿಷಕ್ತರಾದ ಒಡೆಯರ್ ಅವರು ಅಭಿವೃದ್ಧಿ ಆಡಳಿತ ಮತ್ತು ಸಾಮಾಜಿಕ ನ್ಯಾಯದ ಸ್ಥಾಪನೆಯ ಮೂಲಕ ಜನರ ಮನಗೆದ್ದವರು. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಉಪಕ್ರಮಗಳನ್ನು ರೂಪಿಸುವ ಮೂಲಕ ತಮ್ಮ ದೊಡ್ಡಪ್ಪ ಹಾಗೂ ಪೂರ್ವಧಿಕಾರಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ 'ಆದರ್ಶ ರಾಜ್ಯ ಮಾದರಿ'ಯ ಪಥದಲ್ಲಿಯೇ ನಡೆದರು. ಭಾರತ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ 'ಭಾರತ ಸರ್ಕಾರದಲ್ಲಿ ರಾಜ ಸಂಸ್ಥಾನಗಳ ವಿಲೀನ ಒಪ್ಪಂದ'ಕ್ಕೆ ಸಹಿ ಹಾಕಿದ ದೇಶದ ಪ್ರಥಮ ಮಹಾರಾಜರಿವರು. ಈ ರೀತಿ ರಾಜತ್ವವನ್ನು ಭಾರತ ಸರ್ಕಾರದಲ್ಲಿ ವಿಲೀನಗೊಳಿಸಿ ಪ್ರಜಾಪ್ರಭುತ್ವ ಸ್ಥಾಪಿಸಿದ ದೇಶದ ಮೊಟ್ಟ ಮೊದಲ ಮಹಾರಾಜ ಎಂಬ ಕೀರ್ತಿ ಜಯಚಾಮರಾಜೇಂದ್ರ ಒಡೆಯರ್ ಅವರದು.

1940–1950ರವರೆಗೆ ಮಹಾರಾಜರಾಗಿ ರಾಜ್ಯಭಾರ ನಡೆಸಿದ ಇವರು ಭಾರತವು ಗಣರಾಜ್ಯವಾದ (ಜನವರಿ 26, 1950ರಂದು) ನಂತರ ಮೈಸೂರು ರಾಜ್ಯದ ರಾಜಪ್ರಮುಖರಾಗಿ 1956ರವರೆಗೆ ಸೇವೆ ಸಲ್ಲಿಸಿದರು. ನಂತರ ಭಾಷಾವಾರು ರಾಜ್ಯಗಳ ಪುನರ್ ವಿಂಗಡಣೆ (1956) ಆದ ಮೇಲೆ 'ವಿಶಾಲ ಮೈಸೂರು ರಾಜ್ಯ'ದ ಪ್ರಥಮ ರಾಜ್ಯಪಾಲರಾದರು (1956–1964). ಈ ಸಮಯದಲ್ಲಿ ಯಾವುದೇ ವೇತನ ಪಡೆಯದೇ ಪ್ರಜಾ ಸೇವೆಗೈದರು. ತದನಂತರ ಮದರಾಸು ರಾಜ್ಯದ ರಾಲ್ಯಪಾಲರಾಗಿಯೂ (1964–67) ತಮ್ಮ ಸೇವೆ ಸಲ್ಲಿಸಿದರು. ಮುಂದೆ ಮಾಜಿ ಮಹಾರಾಜರಾಗಿ ಭಾರತ ಸರ್ಕಾರದಿಂದ ರಾಜಧನವನ್ನು

ಪಡೆಯುತ್ತಿದ್ದರು. ರಾಜಧನ ಪದ್ಧತಿ ರದ್ದಾದ ನಂತರ ಸರ್ಕಾರಕ್ಕೆ ತೆರಿಗೆ ಕಟ್ಟುವ ಜನಸಾಮಾನ್ಯರಾದರು. ಅಂತಿಮವಾಗಿ ಸೆಪ್ಟೆಂಬರ್ 23, 1974ರಂದು ಶ್ವಾಸಕೋಶದ ಉರಿಯೂತ ಸಮಸ್ಯೆಯಿಂದ ಬೆಂಗಳೂರಿನಲ್ಲಿ ನಿಧನರಾದರು. ಅವರು ನಮ್ಮೆಲ್ಲರಿಗೂ ಆದರ್ಶಪ್ರಾಯ, ಪ್ರೇರಣೆದಾಯಕರೂ ಎಂಬುದು ವಿಶಿಷ್ಟ.

**ಉಪಸಂಹಾರ**

ಒಟ್ಟಾರೆಯಾಗಿ ಕನ್ನಡ ನಾಡು–ನುಡಿಗೆ ಮಹಾರಾಜರ ಕೊಡುಗೆ ಅನನ್ಯವಾದುದು. ರಾಜಪ್ರಭುತ್ವ ತ್ಯಜಿಸಿ ಪ್ರಜಾಪ್ರಭುತ್ವ ಸ್ಥಾಪಿಸಿದ ಇವರ ನಿಸ್ವಾರ್ಥ ನಡೆಯನ್ನು ಕಂಡು ಬೆರಗಾಗಿ ರಾಷ್ಟ್ರಕವಿ ಕುವೆಂಪು, *"ಎಲ್ಲರೂ ಸಿಂಹಾಸನಾಧೀಕಾರಿಯಾಗಿ ಮಹಾರಾಜರಾದರೇ, ಇವರು ಅದನ್ನು ತ್ಯಜಿಸಿಯೇ ಮಹಾರಾಜರಾದರು"* ಎಂದು ಬಣ್ಣಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಮೈಸೂರು ಸುರೇಶ್. (2020). ರಾಜಯೋಗಿ ಶ್ರೀಜಯಚಾಮರಾಜ ಒಡೆಯರ್ ಬಹದ್ದೂರ್ ಮೈಸೂರು ಮೀಡಿಯಾ ಸೆಂಟರ್ ಪ್ರಕಾಶನ.
- ಶಿವಕುಮಾರಸ್ವಾಮಿ.ಎಂ. (2019). ವಿಶಾಲ ಕರ್ನಾಟಕದ ಕನಸುಗಾರ' ಪ್ರಜಾವಾಣಿ, ಬೆಂಗಳೂರು.
- ಮಹಾರಾಜ ಶ್ರೀಜಯಚಾಮರಾಜ ಒಡೆಯರು–ವ್ಯಕ್ತಿಚಿತ್ರ. (2012), ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ
- ಸುಕನ್ಯಾ ಪ್ರಭಾಕರ್. (2005). ಕರ್ನಾಟಕ ಸಂಗೀತಕ್ಕೆ ಶ್ರೀಜಯಚಾಮರಾಜ ಒಡೆಯರ್ ಅವರ ಕೊಡುಗೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.
- ರಂಗಸ್ವಾಮಯ್ಯ, ಜಿ.ಆರ್. (2001). ಕರ್ನಾಟಕದ ಸಂಕ್ಷಿಪ್ತ ಚರಿತ್ರೆ. ಜೆ.ಎಸ್.ಎಸ್. ಪ್ರಿಂಟರ್ಸ್, ಮೈಸೂರು.
- https://en.wikipedia.org/wiki/Jayachamarajendra_Wadiyar
- https://kannadasahithyaparishattu.in/?p=415
- https://kannada.asianetnews.com/mysore/mysore-king-rajayogi-jayachamaraja-wadiyar-birth-centenary-year-valedictory-function-qdnf8a